
# ಕಾನನ

ಮಾರ್ಚ್–2026

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ

**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಓ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ



© ಶ್ರೀಕಾಂತ್ ಎ. ವಿ.

ಮಾರ್ಚ್–2026

WCG
Wildlife Conservation Group

© ಶುಭಂ ಸೋನಿ

## ಲೇಖನಗಳು

* ನಾಗಬನದ ಸುತ್ತ – ರೈಹಾನಾ

* ಕಾಡಂಚಿನ ಅಪರೂಪದ ಸಸ್ಯವರ್ಗ – ಡಾ. ಚಂದ್ರಪ್ಪ ಹೆಚ್.

* ಕಲ್ಲರಳಿ ಮರ – ಕೆ. ಪಿ. ಶಂಕರಪ್ಪ, ಶಾಂತಮ್ಮ ಎಸ್.

* ವನಬಂಧ – 10 – ಸುಬ್ಬು ಬಾದಲ್

* ಭೂಮಿಗೆ ಅಪ್ಪಳಿಸಬಲ್ಲ ಕ್ಷುದ್ರಗ್ರಹಗಳು! (ವಿವಿ ಅಂಕಣ) – ಜೈಕುಮಾರ್ ಆರ್.

* ಮರ ನೀ ಅಮರ (ಕವನ) – ಬಿ. ಸೀತಾರಾಮು

* ಪ್ರಕೃತಿ ಬಿಂಬ – ಡಾ. ಶಿಶುಪಾಲ ಎಸ್., ದೀಪ್ತಿ ಎನ್.



ಮುಖಪುಟ ಛಾಯಾಚಿತ್ರ
ಹಾಲಕ್ಕಿ

ಮುಖಪುಟ
ಮಂಥನ್

ವಿನ್ಯಾಸ
ಧನರಾಜ್ ಎಂ.




# ನಾಗಬನದ ಸುತ್ತ

**(ಕಾನನ ಸಿರಿ ಲೇಖನ ಸ್ಪರ್ಧಾ ವಿಜೇತ ಲೇಖನ)**

ಅತ್ತ ಪೇಟೆಯೂ ಅಲ್ಲ ಇತ್ತ ಹಳ್ಳಿಯೂ ಅಲ್ಲದ ಸಣ್ಣದೊಂದು ಊರಿನಲ್ಲಿ ಹುಟ್ಟಿ ಬೆಳೆದ ನನಗೆ ಪ್ರಕೃತಿಯೊಂದಿಗೆ 'ಅಬ್ಬಾ' ಎಂದೆನಿಸಿಕೊಳ್ಳುವ ಅನುಭವವೇನೂ ಇಲ್ಲದಿದ್ದರೂ ನನ್ನ ಪ್ರಾಯದ ಅದೆಷ್ಟೋ ಯುವ ಜನತೆ ಕಂಡು ಕೇಳರಿಯದ ಹಲವು ರಸಮಯ ನಿಮಿಷಗಳು ನನ್ನ ಜೀವನದಲ್ಲೂ ಕಳೆದು ಹೋಗಿವೆ. ಪ್ರಕೃತಿಯ ಒಡನಾಟವನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದ ನನ್ನ ತಾಯಿಗೆ ಆಡು ಸಾಕಾಣಿಕೆಯಲ್ಲಿ ವಿಪರೀತ ಆಸಕ್ತಿ ಇದ್ದ ಕಾರಣ ಆಡು ಮೇಯಿಸುವ ಸೋಗಿನಲ್ಲಿ ಮನೆ ಸಮೀಪದ ಹಲವು ಗುಡ್ಡ-ಕಾಡುಗಳ ದರ್ಶನ ಭಾಗ್ಯ ನನಗೊದಗಿದ್ದು ನನ್ನ ಅದೃಷ್ಟವೆಂದೇ ಹೇಳುತ್ತೇನೆ.

ಪ್ರತಿದಿನ ಸಂಜೆ ಶಾಲೆ ಬಿಟ್ಟ ನಂತರ ಆಡುಗಳ ಸೈನ್ಯದೊಂದಿಗೆ ಗುಡ್ಡ ಹತ್ತುತ್ತಿದ್ದ ನಾನೂ ನನ್ನ ಅಣ್ಣಂದಿರೂ ಸೂರ್ಯ ಮುಳುಗುವ ಹೊತ್ತಿಗೆ ಹಲವಾರು ನವಿಲುಗರಿಗಳನ್ನೂ, ಕುಂಟಲಕಾಯಿ, ಚೂರಿಕಾಯಿ, ಕೇಪುಳುಕಾಯಿ ಹೀಗೆ ಹೆಸರೇ ತಿಳಿಯದ ಬಗೆ-ಬಗೆಯ ಭಕ್ಷ್ಯ ಯೋಗ್ಯ ಕಾಯಿ-ಕರಡುಗಳೊಂದಿಗೆ ಮರಳುತ್ತಿದ್ದೆವು. ಆಸಕ್ತಿದಾಯಕ ವಿಚಾರವೆಂದರೆ, ನಮ್ಮ ಆಡುಭಾಷೆಯಲ್ಲಿ 'ಮೊಡಕ್ಕಪಝುಂ' ಎಂದು ಕರೆಯಲ್ಪಡುವ ಕಾಯಿಯೊಂದು ಪೊದೆಯ ನಡುವೆ ದೊರಕುತ್ತಿತ್ತು. ಅದು ಗಾತ್ರದಲ್ಲಿ ದೊಡ್ಡ ನಿಂಬೆ ಹಣ್ಣನ್ನೂ ಬಣ್ಣದಲ್ಲಿ ಕಿತ್ತಳೆಯನ್ನೂ ಒಳ ರಚನೆಯಲ್ಲಿ ಥೇಟ್ ಪುನರುಪುಳಿ ಹಣ್ಣನ್ನೂ ಹೋಲುತ್ತಿತ್ತು. ಹೆಚ್ಚೇನೂ ಸಿಹಿಯಲ್ಲದ ಅಲ್ಪವೂ ಹುಳಿಯಲ್ಲದ ಈ ವಿಶಿಷ್ಟ ಕಾಯಿಯು ರುಚಿಯಲ್ಲಿ ತಟ್ಟನೆ ಯಾವ ಹಣ್ಣಿನೊಂದಿಗೂ ಹೋಲಿಸಲಾಗದಂತಿರುವುದರಿಂದ ನನ್ನಿಂದ ಹೆಚ್ಚೇನೂ ಹೇಳಲು ಸಾಧ್ಯವಿಲ್ಲ. ಆದ್ದರಿಂದಲೇ ಹತ್ತು-ಹಲವು ಮಂದಿಯಲ್ಲಿ ಈ ಹಣ್ಣಿನ


ಕುರಿತು ವಿಚಾರಿಸಿ, ಅನ್ವೇಷಿಸಿದ ಬಳಿಕವೂ ಯಾರೊಬ್ಬರಿಗೂ ಅದೇನೆಂದು ಹೊಳೆಯದಾಗಿ ಅದರ ನಿಜವಾದ ಹೆಸರೇನು, ಗುಣವೇನು ಎಂಬುವುದನ್ನು ತಿಳಿಯಲು ಅಂತೆಯೇ ತಿಳಿಸಲು ವಿಫಲವಾಗಿದ್ದೇನೆ ಎನ್ನಲು ಖೇದವಾಗುತ್ತಿದೆ. ಆ ಕಾಲದಲ್ಲಿ ಅದರ ಒಂದು ಬೀಜವನ್ನಾದರೂ ಬಿತ್ತುವ ಯೋಚನೆ ಹೊಳೆದಿದ್ದರೆ ಬಹುಶಃ ಅದು ನಮ್ಮ ಹಿತ್ತಲಲ್ಲಿ ಬೆಳೆದು ಬೀಡು ಬಿಟ್ಟಿರುತ್ತಿತ್ತೇನೋ. ಕನಿಷ್ಟ ಪಕ್ಷ ಅದನ್ನು ಉಳಿಸುವ ಪ್ರಯತ್ನವಾದರೂ ಮಾಡಿದ್ದೆ ಎನ್ನುವ ಸಾರ್ಥಕತೆಯಾದರೂ ಇರುತ್ತಿತ್ತು. ಅಂತೂ ಈ ಹೊತ್ತಿಗೆ ಅದು ಎಲ್ಲಾದರೂ ಉಳಿದಿದೆಯೋ ನಿರ್ನಾಮವಾಗಿದೆಯೋ ಕಾಣೆ...

ನಮ್ಮ ಹಿತ್ತಲ ಕಾಡಿನ ಕುರಿತು ಯೋಚಿಸಿದಂತೆ ನೆನಪುಗಳ ಬುತ್ತಿಯು ಮತ್ತಷ್ಟು ಬಿಚ್ಚಿಕೊಳ್ಳುತ್ತದೆ. ಆ ಕತ್ತಲ ಕಾಡಿನ ದಟ್ಟ ಪೊದೆಯ ನಡುವೆ ನಾಗನ ಕಟ್ಟೆಯೊಂದು ಇದ್ದು, ಸಂಜೆಯ ನಂತರ ಅದರ ಬಳಿ ಸುಳಿಯಕೂಡದೆಂದು ಪ್ರತಿದಿನವೂ ತಾಯಿಯ ಕಟ್ಟಪ್ಪಣೆ ಇರುತ್ತಿತ್ತು. ಮೊದಮೊದಲು ಅದರತ್ತ ನೋಟ ತಿರುಗಿಸಲೂ ಭಯವಾಗುತ್ತಿದ್ದರೂ ಯಾವುದೋ ಒಂದು ಅನಿರೀಕ್ಷಿತ ಸಂದರ್ಭದಲ್ಲಿ ನಾನು ಅದರ ಹಿಂದೆಯೇ ಅಡಗಿ ಕುಳಿತು ತಾಸುಗಳ ವರೆಗೂ ಹುಡುಕಾಡಿಸಿ ಕೊನೆಗೆ ಎಲ್ಲರಿಂದಲೂ ವಾಚಾಮಗೋಚರ ಬೈಸಿಕೊಂಡಿದ್ದೆ. ನಂತರ, ತಾಯಿ ಹೇಳುವಂತೆ ಭಯಪಡುವಂತದ್ದೇನೂ ಅಲ್ಲಿ ಇಲ್ಲವೆಂದು ಎಲ್ಲರಿಗೂ ಮನದಟ್ಟಾಗಿ ಮುಂದೆ ನಮ್ಮೆಲ್ಲರ ಚಟುವಟಿಕೆಗಳಿಗೆ ನಾಗನಕಟ್ಟೆಯೇ ಪ್ರಮುಖ ಕೇಂದ್ರವಾಯಿತು. ಎಷ್ಟರ ಮಟ್ಟಿಗೆಯೆಂದರೆ ಶಾಲೆಯ ಪರೀಕ್ಷಾ ಸಮಯದಲ್ಲಿಯೂ ಸಹ ನಾನು ನಾಗಬನಕ್ಕೆ ಭೇಟಿ ನೀಡುವುದನ್ನು ತಪ್ಪಿಸುತ್ತಿರಲಿಲ್ಲ. ನಾಗನಕಟ್ಟೆಯಲ್ಲೇ ತಾಸುಗಟ್ಟಲೆ ಪುಸ್ತಕ ಹಿಡಿದು ಓದುತ್ತಾ ಕೂರುತ್ತಿದ್ದೆ. ಕೆಲವೊಮ್ಮೆ ಕಟ್ಟೆಯ ಮೇಲೆ ಬೆಳೆಯುತ್ತಿದ್ದ ಪಾಚಿಯಂತಹ ಸಣ್ಣ-ಸಣ್ಣ ಹುಲ್ಲಿನಲ್ಲಿ ಕೋಳಿ ಜುಟ್ಟು ಆಟ, ಪುಸ್ತಕದ ಕೊನೆಯ ಪುಟದಲ್ಲಿ ಕಳ್ಳ-ಪೋಲಿಸ್, ಬಿಂಗೋ, ಹೆಸರು-ಊರು ಮುಂತಾದ ಆಟಗಳನ್ನು ಅಪರೂಪಕ್ಕೆ ಆಡುತ್ತಿದ್ದುದೂ ಇದೇ ಕಟ್ಟೆಯಲ್ಲಿ.






ಹೀಗೇ ಎಂದಿನಂತೆ ಒಂದು ಸಂಜೆ ಅಣ್ಣಂದಿರು ಆಡು ಮೇಯಿಸುತ್ತಾ ಅದರ ಕೆಲಸದಲ್ಲಿ ನಿರತರಾಗಿರಬೇಕಾದರೆ ನಾನು ಒಬ್ಬಂಟಿಯಾಗಿ ಕಾಡೊಳಗೆ ಹೊಕ್ಕು ಮಧ್ಯದಲ್ಲಿದ್ದ ಬೃಹತ್ ಬಂಡೆಯ ಮೇಲೆ ಹತ್ತಿ ಆಯತಪ್ಪಿ ನೆಲಕ್ಕುರುಳಿದ್ದೆ. ಅಷ್ಟು ಸಾಲದೆಂಬಂತೆ ನನ್ನ ಹಿಂದೆಯೇ ದೊಡ್ಡ ಗಾತ್ರದ ಕಲ್ಲೊಂದು ಉರುಳಿ ನನ್ನ ಕಾಲಮೇಲೆಯೇ ಬಿದ್ದು ಅನಪೇಕ್ಷಿತ ದಾಳಿ ಮಾಡಿತ್ತು. ನನ್ನ ಆರ್ತನಾದಕ್ಕೆ ಬೆಚ್ಚಿದ ಅಣ್ಣಂದಿರು ನನಗೆ ಯಾವುದೋ ಕಾಡುಪ್ರಾಣಿಯೇ ದಾಳಿಮಾಡಿರಬೇಕು ಎಂದು ಭಾವಿಸಿ ಅಳುತ್ತಾ ಆರ್ಭಟಿಸುತ್ತಾ  ನನ್ನನ್ನು ಹುಡುಕಿ ಹೊತ್ತು ತಂದು ಬಯಲಲ್ಲಿ ಕೂರಿಸಿ ನಿಟ್ಟುಸಿರು ಬಿಟ್ಟರಾದರೂ ನನ್ನ ಅಳುಮುಂಜಿ ಕಂಡರೆ ಅಪ್ಪನ ಸಹಸ್ರ ನಾಮಾರ್ಚನೆಗೆ ಅವರು ಗುರಿಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲವಾದ್ದರಿಂದ 'ಅಳಬೇಡವೇ ತಂಗಿ' ಎಂದು ನನ್ನನ್ನು ಪುಸಲಾಯಿಸುತ್ತಲೇ ಕಮ್ಯುನಿಸ್ಟ್ ಗಿಡದ ಎಲೆಗಳನ್ನು ಜಜ್ಜಿ ನನ್ನ ಗಾಯಕ್ಕೆ ಹಿಂಡಿ ಏನೂ ಆಗಿಲ್ಲವೆಂಬಂತೆ ಮನೆಗೆ ಕರೆದೊಯ್ದಿದ್ದರು. ಯಾರ ದುರದೃಷ್ಟವೋ....! ಒಟ್ಟು ರಾತ್ರಿಯಾಗುವ ಹೊತ್ತಿಗೆ ನನ್ನ ಕಾಲು ವಿಪರೀತ ಬಾತುಕೊಂಡು ಅಸಹ್ಯ ನೋವಿನಿಂದ ನನ್ನ ಚೀರಾಟ ನಿಲ್ಲದಾಗಿ ಕೊನೆಗೆ ಆಸ್ಪತ್ರೆಗೆ ಧಾವಿಸಿ ಬ್ಯಾಂಡೇಜು ಹಾಕಿಸಿ ಮರಳುವ ಹೊತ್ತಿಗೆ ಅಣ್ಣಂದಿರ ಕಿವಿಗಳ ತೂತು ಮುಚ್ಚಿಕೊಂಡಿದ್ದವು. ಮತ್ತೆ ನಾನು ನೆಟ್ಟಗಾಗಲು ತಗುಲಿದ್ದು ಒಟ್ಟು ಹನ್ನೆರಡು ದಿನಗಳು!!




ಟಿವಿ, ಮೊಬೈಲ್, ವಿಡಿಯೋ ಗೇಮುಗಳ ಹಾವಳಿ ಅಷ್ಟಾಗಿ ಧಾವಿಸಿರದ ಆ ಕಾಲದಲ್ಲಿ ಶಾಲಾ ರಜೆ ಬಂತೆಂದರೆ ಸಾಕು ನೆಂಟರಿಷ್ಟರ ಮಕ್ಕಳೆಲ್ಲಾ ನಮ್ಮಲ್ಲಿಗೆ ಬಂದು ಬೀಡು ಬಿಟ್ಟಿರುತ್ತಿದ್ದರು. ಮಧ್ಯಾಹ್ನದವರೆಗೆ, ಮನೆ ಹಿತ್ತಲಲ್ಲೇ ಇರುವ ದೊಡ್ಡ ಅಕೇಶಿಯಾ ಮರಕ್ಕೆ ಹಾಕಿದ ಬಾವಿಯ ಹಗ್ಗದಲ್ಲಿ ಉಯ್ಯಾಲೆ ಆಟ, ಪೆಟ್ಲಂಗೋವಿ, ಲಗೋರಿ, ಕ್ರಿಕೆಟ್ ಹೀಗೇ ಸಾಗಿದರೆ ನಡುವೆ ಬೀಳುವುದು-ಅಳುವುದು, ಗಲಾಟೆ-ಮುನಿಸು ಸಾಮಾನ್ಯವಾಗಿತ್ತು. ಮತ್ತೆ ಮಧ್ಯಾಹ್ನದ ರಣ ಬಿಸಿಲು ಅಲ್ಪಸ್ವಲ್ಪ ಮಾಯವಾಗುವ ಹೊತ್ತಿಗೆ ಹಿರಿ-ಕಿರಿಯರೆನ್ನದೆ ಎಲ್ಲರೂ ನಾಗಬನದಲ್ಲಿ ಕಣ್ಣಾಮುಚ್ಚಾಲೆ ಆಡುತ್ತಿದ್ದದ್ದು ಯಾವ ವಿಡಿಯೋ ಗೇಮೂ ಗ್ಯಾಜೆಟ್ಗಳೂ ನೀಡಲಾರದಷ್ಟು ಮನರಂಜನೆ, ಸಂತೋಷ ನೀಡುತ್ತಿತ್ತು.

ದಟ್ಟ ಪೊದೆಗಳ ನಿಗೂಢ ಇರುಳು, ತರಗೆಲೆಗಳಿಂದ ಮುಚ್ಚಿದ ಗುಂಡಿ-ಕಣಿವೆಗಳು, ಮರದ ತುದಿಯ ರೆಂಬೆಗಳು, ಪೊಟರೆಗಳು ಇವೆಲ್ಲಾ ನಮ್ಮ ನೆಚ್ಚಿನ ಅಡಗುತಾಣಗಳಾಗಿದ್ದವು. ಹುಡುಕಿ-ಹುಡುಕಿ ಬಳಲಿ ಬೆಂಡಾದ ನಂತರ ಹುಡುಕಿಸಿಕೊಳ್ಳುವವರೂ ಕೂತಲ್ಲೇ ಬೇಸತ್ತು ಅಲ್ಲೇ ಇರುತ್ತಿದ್ದ ಯಾವುದಾದರೊಂದು ಗಿಡದ ಎಲೆಯನ್ನು ಕಿತ್ತು ಬೀಡಿಯಂತೆ ಸುರುಳಿ ಸುತ್ತಿ, ತುದಿಯನ್ನು ಬೆರಳಿನಿಂದ ಒತ್ತಿ

ಪೀಪಿಯಂತೆ ಊದಿ ಶಬ್ದ ಬರಿಸಿ ನಮ್ಮ-ನಮ್ಮ ಅಡಗುತಾಣಗಳ ಸುಳಿವನ್ನು ನಾವೇ ನೀಡುತ್ತಿದ್ದದ್ದು ಆಟದ ಆಯಾಮವನ್ನೇ ಬದಲಾಯಿಸಿ ಇನ್ನಷ್ಟು ರೋಚಕಗೊಳಿಸುತ್ತಿತ್ತು.

ಈ ಭಯಂಕರ ಆಟದ ನಡುವೆ ಕೋತಿ, ನವಿಲು, ಜಿಂಕೆ, ಹಾವುಗಳ ದರ್ಶನ ಸಾಮಾನ್ಯವಾಗಿರುತ್ತಿತ್ತಲ್ಲದೆ ಮರಳುವ ಹೊತ್ತಿಗೆ ಕೂದಲುಗಳೆಡೆಯಲ್ಲಿ ಹುಲ್ಲು-ಕಡ್ಡಿಗಳೂ, ಕೈ-ಕಾಲುಗಳ ತುಂಬಾ ಪರಚಿದ ಗಾಯಗಳೂ, ಸೊಳ್ಳೆಕಡಿತದ ಬೊಬ್ಬೆಗಳೂ, ಸ್ಯೆಲೆಂಟಾಗಿ ಕಡಿದು ರಕ್ತ ಹೀರುವ ಉಣುಗುಗಳೂ ಇದ್ದೇ ಇರುತ್ತಿದ್ದವು.

ಹೀಗೊಮ್ಮೆ ಆಟದ ನಡುವೆ 'ಚೇರೆಕಾಯಿ' (ನಿಜವಾದ ಹೆಸರು ಗೊತ್ತಿಲ್ಲ) ಎಂಬ ಗಿಡವೊಂದನ್ನು ಹತ್ತಿ ಅದರಲ್ಲಿನ ಆಕರ್ಷಕವಾದ ಕೆಂಪು ಬಣ್ಣದ ಗೊಂಚಲು ಹೂಗಳನ್ನು ಕಿತ್ತ ಪರಿಣಾಮ ಮುಖ, ತುಟಿ, ಕಣ್ಣು, ಮೂಗೆಲ್ಲವೂ ಜೇನುನೊಣಗಳು ಕಡಿದಂತೆ ಅಸಹ್ಯವಾಗಿ ಬಾತುಕೊಂಡು ಥೇಟ್ ಈಗಿನ ಕಾರ್ಟೂನ್, ವ್ಯಂಗ್ಯ ಚಿತ್ರಗಳ ಪಾತ್ರಧಾರಿಗಳಾಗಿ ಪರಕಾಯ ಪ್ರವೇಶ ಮಾಡಿದ್ದೆವು. ಮನೆಗೆ ಬಂದ ಬಳಿಕ ಅದು ಯಾವುದೋ ವಿಷಯುಕ್ತ ಗಿಡವೆಂದು ಮನೆ ಹಿರಿಯರು ಹೇಳಿದಾಗ ಗೊತ್ತಾಯಿತು. ಅದರ ಬಣ್ಣಕ್ಕೆ ಅದರ ಕಾಯಿಯನ್ನೂ ಕಿತ್ತು ಹೊಟ್ಟೆಗಿಳಿಸಿಕೊಂಡಿದ್ದರೆ ಈ ಕಾಲಕ್ಕೆ ಮಣ್ಣಾಗಿ ಮರೆಯಾಗಿರುತ್ತಿದ್ದೆವೇನೋ.... ಅಂತೂ ಯಾರದೋ ಕರ್ಮಫಲಕ್ಕೆ ಅದನ್ನು ತಿನ್ನುವ ಗೋಜಿಗೆ ಹೋಗದೆ ಬದುಕಿಕೊಂಡೆವು.




ನನಗೆ ಬಾಲ್ಯದಿಂದಲೂ ಧೈರ್ಯ-ಸಾಹಸಕ್ಕೆ ಕೊರತೆಯೇನೂ ಇರದ ಕಾರಣ ಸ್ಥಳ ಎಂತದ್ದೇ ಇರಲಿ ಕಾಲಿಡಲು ಹಿಂದೇಟು ಹಾಕುತ್ತಿರಲಿಲ್ಲ. ಆದರೂ ನಾನು ಯಾವ ಗ್ಯಾರಂಟಿಯಲ್ಲಿ ಆ ದಟ್ಟ ಕಾಡಿನ ತರಗೆಲೆಗಳ ಗುಂಡಿಗಳಿಗೆ ಹಿಂದೆ-ಮುಂದೆ ಯೋಚಿಸದೆ ಇಳಿದು ಕೂರುತ್ತಿದ್ದೆನೋ.....ಆ ದೇವನೇ ಬಲ್ಲ! ಈಗ ನೆನೆದಷ್ಟೂ ರೋಮಾಂಚನಗೊಳ್ಳುತ್ತೇನೆ. ಇವತ್ತೇನಾದರೂ ಅಂತಹ ಸಂದರ್ಭ ಒದಗಿ ಬಂದರೆ ವಿಷ ಜೀವಿ-ಜಂತುಗಳು ಇಲ್ಲದಿರುವುದು ಖಾತ್ರಿಯಾಗದೆ ಖಂಡಿತ ನಾನು ಒಂದು ಹೆಜ್ಜೆಯೂ ಮುಂದಿಡಲಾರೆ. ಅಂದು ನನಗಿದ್ದುದು ಧೈರ್ಯವೋ ಹುಚ್ಚೋ ತಿಳಿಗೇಡಿತನವೋ ಕಾಣೆ......ಅಂತೂ ಈಗ ಮಾತ್ರ ಹಿಂದೆ ಇದ್ದ ಚುರುಕು, ಗಡುಸು ಯಾವುದೂ ನನಗಿಲ್ಲವೆನ್ನುವುದು ನಿಜ. ಹಾಗೆಂದು ನಾನು ಹೆದರು ಪುಕ್ಕಲಂತೂ ಅಲ್ಲವೇ ಅಲ್ಲ ಎಂಬುದನ್ನು ನನ್ನನ್ನು ಬಲ್ಲವರು ಚೆನ್ನಾಗಿ ಬಲ್ಲರು.

ಈ ಪ್ರಪಂಚದಲ್ಲಿ ಪ್ರಕೃತಿಗಿಂತಲೂ ರಮಣೀಯ, ರೋಚಕ, ನಿಗೂಢವಾದದ್ದು ಯಾವುದೂ ಇರಲು ಸಾಧ್ಯವಿಲ್ಲ ಎಂಬುವುದು ನನ್ನ ನಂಬುಗೆ. ನನ್ನ ಅನುಭವಗಳೇನೂ ಈ ವಾದಕ್ಕೆ ಇಂಬು ನೀಡುವಂತೆ ಅನ್ನಿಸದಿದ್ದರೂ 'ಕರ್ವಾಲೊ' ದಂತಹ ಕಾದಂಬರಿಗಳೂ, 'ನಾಗರಹೊಳೆ'ಯಂತಹ ಚಿತ್ರಗಳೂ ನನ್ನ ಸಮರ್ಥನೆಗೆ ಖಂಡಿತ ಶಕ್ತಿ ನೀಡುತ್ತವೆ.

ಒಂದರ್ಥದಲ್ಲಿ ನನ್ನ ಬಾಲ್ಯ ಬಣ್ಣ-ಬಣ್ಣಗಳಿಂದ ಬೆಳಗಲು ಪ್ರಕೃತಿಯು ಬಹುಮುಖ್ಯ ಕಾರಣವೆನ್ನಬಹುದು. ರಾತ್ರಿ-ಹಗಲೆನ್ನದೆ ಸ್ಕ್ರೀನಿನ ಮುಂದೆಯೇ ಕಾಲ ಕಳೆಯುವ ಈಗಿನ ಮಕ್ಕಳ ಬರಡಾದ ಬಾಲ್ಯಕ್ಕಿಂತ ಅದೆಷ್ಟೋ ಭಿನ್ನವಾಗಿ ನಮ್ಮ ಬಾಲ್ಯವು ಹಸಿರು-ಹಸಿರಾಗಿ ಕಂಗೊಳಿಸಿದ್ದು ಹಸಿರ ಒಡನಾಟದಿಂದಲೇ. ನಾಗಬನ ಮಾತ್ರವಲ್ಲದೆ, ಒಂದೆರೆಡು ಬಾರಿ ನನ್ನ ಚಿಕ್ಕಮ್ಮನ ಮನೆ ಸಮೀಪದ ಸಣ್ಣ ತೋಡಿನಲ್ಲಿ ಈಜಾಡಲು ಹೊರಟು, ಮೀನು ಹಿಡಿದು ಬಾಟಲಿಗೆ ತುಂಬಿ ಮನೆಗೆ ತಂದದ್ದೂ ಸಹ ನನ್ನ ಬಾಲ್ಯದ ಸುಂದರ ನೆನಪುಗಳಲ್ಲೊಂದು. ನಂತರದ ಮೂರು ದಿನಗಳು ಜ್ವರದಿಂದ ಮಲಗಿದ್ದೂ ಸಹ ಇದರೊಂದಿಗೆ ಹೇಳಲೇಬೇಕು.

ನನ್ನದು ತೀರಾ ಹಳೆಯದಾದ ಬಾಲ್ಯವೇನೂ ಅಲ್ಲದಿದ್ದರೂ ನಾನು ಪರಿಚಯಿಸಿದ 'ನಾಗಬನ' ಎಂಬ ಸ್ಥಳದಲ್ಲಿನ 'ಬನ'ವೆಲ್ಲಾ ಮಾಯವಾಗಿ ಈಗ ನಾಲ್ಕಾರು ಮನೆಗಳು ತಲೆಯೆತ್ತಿ ನಿಂತಿದೆ. ನಾಗನ ಕಟ್ಟೆಯೊಂದು ಬಿಟ್ಟರೆ ಬೇರೇನೂ ಅಲ್ಲಿ ಮೊದಲಿನಂತೆ ಕಾಣಸಿಗುವುದಿಲ್ಲ. ಹಲವಾರು ಸುಂದರ, ಸಾಹಸಮಯ, ರೋಚಕ ನೆನಪುಗಳನ್ನು ಜೀವಂತವಾಗಿರಿಸಿದ ನಮ್ಮ ನಾಗಬನವೇನೋ ಅಳಿಯಿತು ನಿಜ; ಇನ್ನು ಆ ಹೆಸರಾದರೂ ಉಳಿಯಲಿ -ಎಂದೇ ನನ್ನ ಪ್ರಾರ್ಥನೆ.







**ಲೇಖನ: ರೈಹಾನಾ**
ದಕ್ಷಿಣ ಕನ್ನಡ ಜಿಲ್ಲೆ




# ಕಾಡಂಚಿನ ಅಪರೂಪದ ಸಸ್ಯವರ್ಗ

ಅರಣ್ಯ ಹುಲ್ಲಿನ ಜಾತಿಯ ಸಸ್ಯ ಸಂಕುಲದಿಂದ ಹಿಡಿದು, ಬಳ್ಳಿ-ಕಳ್ಳಿಯ ತರುಲತೆ ಹೊದ್ದು, ಚಿಕ್ಕ ಸೂಕ್ಷ್ಮ ಗಿಡ-ಗಂಟೆಗಳ ಜೊತೆ, ಮುಳ್ಳು-ಕಂಟಿ ಕುರುಚಲು ಪೊದೆ (ಮೆಳೆ), ಹಸಿರು ಪಾಚಿ, ನೀರಿನಲ್ಲಿ ಬೆಳೆವ ಸಸ್ಯ ಸಂಪತ್ತು ಹಾಗೂ ಬೃಹತ್ ಗಾತ್ರದ ಸಂಪದ್ಭರಿತ ವಿವಿಧ ರೀತಿಯ ಮರಗಿಡಗಳಿಂದ ಕಂಗೊಳಿಸುವ ಸಮತೋಲಿತ ಸ್ವಾಭಾವಿಕ ಜೈವಿಕ ಆವಾಸಸ್ಥಾನ. ಸಂಪದ್ಭರಿತ ಕಾಡುಗಳು, ಸಮತೋಲಿತ ಪರಿಸರ ಜೀವಸಂಕುಲ ಹಾಗೂ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅತ್ಯಂತ ಪೂರಕ. ಈ ವಾತಾವರಣದಲ್ಲಿನ ಸಣ್ಣಮಟ್ಟದ ವ್ಯತ್ಯಾಸ, ಬದುಕಿನಲ್ಲಿ ಅಗಾಧ ಪ್ರಮಾಣದ ಏರುಪೇರುಗಳನ್ನ ಸೃಷ್ಟಿಸುತ್ತದೆ. ಸ್ವಾಭಾವಿಕ ಅರಣ್ಯವೇ ನಮ್ಮೆಲ್ಲರ ಬದುಕಿನ ಮೂಲ. ಈ ಅಂಕಣದಲ್ಲಿ, ತೀರಾ ಇತ್ತೀಚೆಗೆ ಕಣ್ಮರೆಯಂಚಿನಲ್ಲಿರುವ ಗುಡ್ಡಗಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಹಾಗೂ ಹಳ್ಳಿಗರ ಮನಗೆದ್ದ ಕೆಲವು ಅಪರೂಪದ ಸವಿಯಬಹುದಾದ ಸಸ್ಯ ಸಂಪತ್ತುಗಳ ಕುರಿತು ಮೆಲುಕು ಹಾಕೋಣ.

**ಕವಳಿ ಹಣ್ಣು (*Carissa carandas*)**

ಸಾಮಾನ್ಯವಾಗಿ ಹಳ್ಳಿಗರಿಗೆ ಹಾಗೂ ಗುಡ್ಡಗಾಡು ವಾಸಿಗಳಾದ ಬುಡಕಟ್ಟು ಜನತೆಗೆ ಹೆಚ್ಚಾಗಿ ಚಿರಪರಿಚಿತವಿರುವ ಅತ್ಯಂತ ಸೊಗಸಾದ ಮುಳ್ಳುಗಳನ್ನು ಹೊಂದಿರುವ ಪೊದೆಗಿಡವಿದು. ಸಾಧಾರಣವಾಗಿ 8–9 ಅಡಿ ಎತ್ತರಕ್ಕೆ ಸುತ್ತಲೂ ತನ್ನ ರೆಂಬೆಕೊಂಬೆಗಳನ್ನು ಹರಡಿ ಬೆಳೆಯುತ್ತದೆ. ಬೂದು ಬಣ್ಣದ ಟೊಂಗೆಗಳ ಭಾಗದಲ್ಲಿ ಸಾಮಾನ್ಯವಾಗಿ ಜೋಡಿಯಾಗಿ ಅಥವಾ Y ಆಕಾರದಲ್ಲಿ ಚೂಪಾದ ಮುಳ್ಳುಗಳನ್ನು ಹೊಂದಿದ್ದು, ತಿಳಿಹಸಿರು ಅಥವಾ ಕಡುಹಸಿರು ಚಿಕ್ಕ ಎಲೆಗಳಿಂದ ಕಂಗೊಳಿಸುವ ಸಸ್ಯ.



ವಸಂತ ಕಾಲದಲ್ಲಿ ಸುಗಂಧಯುಕ್ತ ಬಿಳಿ ಹೂಗಳು ಅರಳಿ, ನಂತರ ಹಾಲಿನಂತಿರುವ ಅಂಟಿನಂಶ (latex) ಹೊಂದಿರುವ ಹಸಿರು ಕಾಯಿಗಳು ಕಟ್ಟುತ್ತವೆ. ಕ್ರಮೇಣ ಅವು ಗುಲಾಬಿ ಅಥವಾ ಕೆಂಪು ಬಣ್ಣಕ್ಕೆ ತಿರುಗಿ, ಪಕ್ವವಾದಾಗ ನೇರಳೆ ಅಥವಾ ಕಪ್ಪು ಬಣ್ಣವನ್ನು ಆವರಿಸಿಕೊಳ್ಳುತ್ತವೆ. ಜೊತೆಗೆ ಸಿಹಿ-ಹುಳಿ ರುಚಿಯನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಒಂದು ಹಣ್ಣಿನಲ್ಲಿ 2–8 ಸಣ್ಣ ಬೀಜಗಳು ಇರುತ್ತವೆ.

ಗುಡ್ಡಗಾಡು ಅಥವಾ ದನಗಾಹಿ ಜನರಿಗೆ, ಹಕ್ಕಿ-ಪಕ್ಷಿಗಳಿಗೆ ನೆಚ್ಚಿನ ಹಣ್ಣಿನ ತಳಿ ಇದಾಗಿದೆ. ಜೊತೆಗೆ ಹಾಲುಭರಿತ ಹಸಿರು ಕಾಯಿ ತುಂಬಾ ಹುಳಿಯಿಂದ ಕೂಡಿದ್ದು, ತಿನ್ನಲು ಹಲ್ಲುಗಳು ಜೋಮು ಹಿಡಿದು ಊಟ ಮಾಡಲು ಸಹ ಸಹಕರಿಸದಂತಾಗಿ ಚುಟುಗುಟ್ಟುತ್ತವೆ ('ಚುಳ್' ಎನ್ನುವಂತಾಗುವುದು). ಸರಿಸುಮಾರು 80ರ ದಶಕದಲ್ಲಿ ಈ ಹಣ್ಣನ್ನು ಶಿರಸಿ ಭಾಗದ ಗುಡ್ಡಗಾಡು ಜನತೆ ಹಾಗೂ ಹಲವು ಜಿಲ್ಲೆಗಳಲ್ಲಿನ ಜನ ಊರ ಸಂತೆಯಲ್ಲಿ ಜೀವನೋಪಾಯಕ್ಕಾಗಿ ಮಾರಾಟ ಮಾಡುವ ಪರಿಪಾಠವಿತ್ತು.

**ಕಾರೆಕಾಯಿ (ಹಣ್ಣು) ಗಿಡ (*Canthium parviflorum*):**




ಹೆಚ್ಚಾಗಿ ಗುಡ್ಡಗಾಡು ಪ್ರದೇಶಗಳಲ್ಲೇ ದಟ್ಟವಾಗಿ ಒತ್ತೊತ್ತಾಗಿ ಕುರುಚಲು ಪೊದೆಯಂತೆ ಸುಮಾರು ಏಳೆಂಟು ಅಡಿ ಎತ್ತರಕ್ಕೆ ಬೆಳೆಯುವ ಮುಳ್ಳುಗಳನ್ನು ಹೊಂದಿರುವ ಗಿಡವಿದು. ಎಲೆಗಳ ರಚನೆ, ಆಕಾರ, ಟೊಂಗೆಗಳ ಬಣ್ಣ ಹಾಗೂ ಮುಳ್ಳುಗಳ ವಿನ್ಯಾಸ ನೋಡಲು ಕವಳಿ ಗಿಡ (Carissa carandas) ದ ಹೋಲಿಕೆಯಂತಿದ್ದರೂ, ಚಿಕ್ಕ ಗಾತ್ರದ ಎಲೆಗಳು, ಮೊನಚಾದ ಮುಳ್ಳುಗಳು ಮತ್ತು ಟೊಂಗೆಗಳು ಹಸಿರು ಮಿಶ್ರಿತ ಬೂದುಬಣ್ಣದ್ದಾಗಿರುವುದು ಇದರ ವಿಶೇಷತೆ. ಸಾಮಾನ್ಯವಾಗಿ ಕವಳಿ ಇರುವ ಪ್ರದೇಶಗಳಲ್ಲಿ ಈ ಕಾರೆ ಗಿಡಗಳೂ ಬೆಳೆದಿರುವುದು ಕಂಡುಬರುತ್ತದೆ.

ಕಾರೆ ಗಿಡದ ಹಸಿರು ಕಾಯಿಗಳು ಗಟ್ಟಿಯಾಗಿದ್ದು, ಮುಳ್ಳುಗಳ ಸಮೀಪ ಒಂದೊಂದು ಅಥವಾ ಸಣ್ಣ ಗುಂಪು ಮೈದಳೆದು ಬೆಳೆಯುತ್ತವೆ. ಈ ಗಿಡದಲ್ಲಿ ಯಾವುದೇ ಅಂಟಿನಂಶದ ಹಾಲು (latex) ಕಾಣಿಸುವುದಿಲ್ಲ. ಕಾಯಿಗಳು ತಿಳಿಹಸಿರು ಬಣ್ಣ ಹೊಂದಿದ್ದು, ಒಳಗಿನ ತಿರುಳು ರುಚಿಯಾಗಿದ್ದು ಬೀಜ ದೊಡ್ಡದಾಗಿರುತ್ತದೆ. ಕಾಯಿ ಕ್ರಮೇಣ ಹಳದಿ ಮಿಶ್ರಿತ ಹಸಿರು ಅಥವಾ ಹಳದಿ ಬಣ್ಣಕ್ಕೆ ತಿರುಗಿ, ನಂತರ ಕೆಂಪು ಅಥವಾ ಗಾಢ ಕಪ್ಪು ಬಣ್ಣಕ್ಕೆ ಪಕ್ವವಾಗುತ್ತದೆ ಮತ್ತು ಸವಿಯಲು ರುಚಿಯಾಗಿರುತ್ತದೆ. ಬೀಜ ತಿನ್ನಲು ಒಗರಾಗಿರುತ್ತದೆ.

ಅಳಿಲು ಹಾಗೂ ಹಲವು ಪಕ್ಷಿಗಳಿಗೆ ಇದು ಅತ್ಯಂತ ನೆಚ್ಚಿನ ಹಣ್ಣಾಗಿದ್ದು, ಹಿಂದೆ ವಿಶೇಷವಾಗಿ 90ರ ದಶಕದಲ್ಲಿ ಈ ಹಣ್ಣಿನ ಮಾರಾಟ ಗ್ರಾಮೀಣ ಸಂತೆಗಳಲ್ಲಿ ಕಾಣಿಸುವುದು ಸಾಮಾನ್ಯವಾಗಿತ್ತು.

**ಸಕ್ಕರೆ ಗಿಡ / ಕಾಶಿ ಗಿಡ (*Solanum nigrum*):**

ರಸ್ತೆ ಬದಿ, ಕುರುಚಲು ಪೊದೆಗಳು, ಬೇಲಿ ಅಥವಾ ಹೊಲಗದ್ದೆಗಳ ಬದುಗಳಲ್ಲಿ ಯಥೇಚ್ಛವಾಗಿ ಬೆಳೆಯುವ ಅಂದಾಜು ಎರಡು ಅಥವಾ ಮೂರು ಅಡಿ ಎತ್ತರದ ಚಿಕ್ಕ ಸಸ್ಯ. ಎಲೆಗಳು ಸಾಧಾರಣ ಹಸಿರಿನಿಂದ ಕಡು ಹಸಿರು ಬಣ್ಣದ್ದಾಗಿದ್ದು, ಕಾಂಡವು ಮೃದುವಾಗಿದ್ದು ಕೆಲವೊಮ್ಮೆ ನೇರಳೆ ಮಿಶ್ರಿತ ಹಸಿರು ಬಣ್ಣದ ಛಾಯೆ ಹೊಂದಿರುತ್ತದೆ.




ಟೊಂಗೆಗಳಲ್ಲಿ ಅಲ್ಲಲ್ಲಿ ಗೊಂಚಲು ರೀತಿ ಚಿಕ್ಕ ಚಿಕ್ಕ ಗೋಲಾಕಾರದ ಕಾಯಿಗಳು ಬೆಳೆಯುತ್ತವೆ. ಮೊದಲು ತಿಳಿಹಸಿರು ಬಣ್ಣದಲ್ಲಿರುವ ಈ ಕಾಯಿಗಳು ಕ್ರಮೇಣ ಗಾಢ ನೇರಳೆ ಅಥವಾ ಕಪ್ಪು ಬಣ್ಣಕ್ಕೆ ತಿರುಗಿ ಹಣ್ಣಾಗುತ್ತವೆ. ಹಣ್ಣುಗಳು ರಸಯುಕ್ತವಾಗಿದ್ದು ಸ್ವಲ್ಪ ಸಿಹಿ ರುಚಿಯನ್ನು ಹೊಂದಿರುತ್ತವೆ. ಒಂದು ಹಣ್ಣಿನಲ್ಲಿ ಹಲವಾರು ಸಣ್ಣ ಬೀಜಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ಎಲ್ಲೆಡೆ ಕಂಡುಬರುವ ಈ ಸಸ್ಯದ ಹಣ್ಣುಗಳನ್ನು ಅಳಿಲುಗಳು ಮತ್ತು ಹಲವಾರು ಪಕ್ಷಿಗಳು ಆಹಾರವಾಗಿ ಬಳಸುತ್ತವೆ.

**ಮೆಕ್ಕೆಕಾಯಿ ಬಳ್ಳಿ (*Citrullus colocynthis*):**




ಸೌತೆ, ಕಲ್ಲಂಗಡಿ ಹಾಗೂ ಕುಂಬಳಕಾಯಿ ಜಾತಿಯ ಬಳ್ಳಿ ಸಂಕುಲಕ್ಕೆ ಸೇರಿದ ಒಂದು ಕಾಡುಬಳ್ಳಿಯೇ ಈ ಮೆಕ್ಕೆಕಾಯಿ ಬಳ್ಳಿ. ಬೀಳುಬಿಟ್ಟ ಹೊಲಗದ್ದೆಗಳಲ್ಲಿ ಅಥವಾ ಮೇರೆಗಳಲ್ಲಿ ಎಲ್ಲೆಡೆ ನೆಲದಲ್ಲಿಯೇ ಹರಡಿ ಬೆಳೆಯುವ ಸಸ್ಯ. ಬಳ್ಳಿಯ ತಂತುಗಳು ಎಲ್ಲೆಡೆ ಪಸರಿಸಿ ಬೆಳೆಯುತ್ತವೆ. ಇದರ ಎಲೆಗಳು ಚಿಕ್ಕದಾಗಿದ್ದು ಇದರ ಎಲೆಗಳು ಚಿಕ್ಕದಾಗಿದ್ದು ಅಂಚುಗಳಲ್ಲಿ ಒಳಕ್ಕೆ ವಿಭಜಿತವಾದ ರೂಪವನ್ನು ಹೊಂದಿರುತ್ತವೆ. ಬಳ್ಳಿಯಲ್ಲಿ ಸಾಮಾನ್ಯವಾಗಿ ಗೋಳಾಕಾರದ ಹಸಿರು ಬಣ್ಣದ ಕಾಯಿ ಬೆಳೆಯುತ್ತದೆ. ಹಣ್ಣು ಬಲಿತಾಗ ಹಳದಿ ಬಣ್ಣ ಪಡೆಯುತ್ತದೆ. ಈ ಕಾಯಿಯ ತಿರುಳು ತೀವ್ರ ಕಹಿ ರುಚಿಯನ್ನು ಹೊಂದಿದ್ದು ಸಾಮಾನ್ಯವಾಗಿ ತಿನ್ನಲು ಯೋಗ್ಯವಲ್ಲ. ಆದರೆ ಕೆಲವು ಸ್ಥಳಗಳಲ್ಲಿ ಇದರ ಹಣ್ಣು ಮತ್ತು ಬೀಜಗಳನ್ನು ಸಾಂಪ್ರದಾಯಿಕ ಔಷಧೀಯ ಬಳಕೆಗಳಿಗೆ ಬಳಸಲಾಗುತ್ತದೆ.

**ಸಿಂಬಳೆ (ಚಳ್ಳೆ/ಅಂಟು) ಹಣ್ಣಿನ ಗಿಡ (*Cordia dichotoma*):**




ಪ್ರಕೃತಿಯಲ್ಲಿ ಸಹಜವಾಗಿಯೇ ಬೆಳೆಯುವ ಗಿಡಗಳಲ್ಲಿ ಇದೂ ಸಹ ಒಂದು. ತುಂಬಾ ದೊಡ್ಡದಾಗಿ ಅಲ್ಲದಿದ್ದರೂ ಸುಮಾರು 20 ರಿಂದ 25 ಅಡಿ ಎತ್ತರದವರೆಗೆ ಬೆಳೆಯುವ ಮಧ್ಯಮ ಗಾತ್ರದ ಮರ. ಎಲ್ಲೆಡೆ ಕಂಡುಬರುವ ಹಸಿರು ಸಸ್ಯವರ್ಗಗಳಲ್ಲಿ ಇದೂ ಒಂದು. ಇದರ ಹಸಿರು ಕಾಯಿಗಳು ಗೋಲಿ ಆಕಾರ ಹಾಗೂ ಗಾತ್ರ ಹೊಂದಿದ್ದು, ಒಳಗೆ ಗಟ್ಟಿ ಬೀಜದ ಜೊತೆ ಅಂಟಿನಂಶದ ಅಥವಾ ಲೋಳೆಯಂತಹ ತಿರುಳು ಒಳಗೊಂಡಿರುತ್ತದೆ. ಆ ತಿರುಳನ್ನು ಸವಿದು, ತುಸು ಗಾತ್ರದಲ್ಲಿ ದೊಡ್ಡದಾಗಿರುವ ಗಟ್ಟಿ ಬೀಜವನ್ನು ಹೊರಗೆ ಎಸೆಯಲಾಗುತ್ತದೆ. ಹಣ್ಣಾದ ಕಾಯಿ ತಿಳಿ ಹಳದಿ ಅಥವಾ ಬಾದಾಮಿ ಬಣ್ಣವನ್ನು ಪಡೆಯುತ್ತದೆ ಹಾಗೂ ಒಳಗಿನ ತಿರುಳು ಹೆಚ್ಚಿನ ರುಚಿಯನ್ನು ಹೊಂದಿರುತ್ತದೆ. ಚಿಕ್ಕ ಮಕ್ಕಳು ಸಹಿತ ಎಲ್ಲರೂ ಈ ಹಣ್ಣನ್ನು ಸವಿಯುತ್ತಾರೆ.

**ದ್ವಾರ ಹುಣಸೆ ಮರ (*Pithecellobium dulce*)**




ಹಕ್ಕಿ-ಪಕ್ಷಿಗಳ ಪ್ರಿಯವಾದ ಹಣ್ಣಿನ ವಿಧವನ್ನು ಕೊಡುವ ದೊಡ್ಡ ಮರಗಳಲ್ಲಿ ದ್ವಾರ ಹುಣಸೆ ಪ್ರಮುಖವಾದುದು. ಇದು ಸಾಮಾನ್ಯವಾಗಿ ಸುಮಾರು ಮೂವತ್ತರಿಂದ ನಲವತ್ತು ಅಡಿ ಅಥವಾ ಅದಕ್ಕಿಂತ ಹೆಚ್ಚು ಎತ್ತರಕ್ಕೆ ಬೆಳೆಯುವ ಮರ. ಗಿಡದ ಟೊಂಗೆಗಳಲ್ಲಿ ಸಾಮಾನ್ಯವಾಗಿ ಜೋಡಿಯಾಗಿ ತೀಕ್ಷ್ಣ ಮುಳ್ಳುಗಳು ಕಂಡುಬರುತ್ತವೆ. ಎಲೆಗಳು ಸಣ್ಣಸಣ್ಣ ಜೋಡಿಗಳಾಗಿ ಇರುವ ಸಂಯುಕ್ತ ಎಲೆಗಳಾಗಿದ್ದು, ಮರಕ್ಕೆ ಸೊಂಪಾದ ಹಸಿರು ರೂಪ ನೀಡುತ್ತವೆ.

ವಸಂತಕಾಲದಲ್ಲಿ ಸಣ್ಣ ಬಿಳಿ-ಹಸಿರು ಹೂಗಳು ಮೂಡಿ ನಂತರ ಹಣ್ಣುಗಳು ಕಟ್ಟುತ್ತವೆ. ಹಣ್ಣುಗಳು ಶೇಂಗಾ ಕಾಯಿಯಂತಿರುವ ಸುರುಳಿಯಾದ ಕೊಂಬು (pod) ರೂಪದಲ್ಲಿ ಬೆಳೆಯುತ್ತವೆ. ಪಕ್ವವಾಗುವ ವೇಳೆ ಹೊರಗಿನ ಹಸಿರು ತೊಗಟೆ ಕ್ರಮೇಣ ಗುಲಾಬಿ ಅಥವಾ ಕೆಂಪು ಮಿಶ್ರಿತ ಬಣ್ಣ ಪಡೆದು ಬಿರುಕು ಬಿಟ್ಟು ತೆರೆದುಕೊಳ್ಳುತ್ತದೆ. ಒಳಭಾಗದಲ್ಲಿ ಕಪ್ಪು ಬಣ್ಣದ ಗಟ್ಟಿ ಬೀಜಗಳನ್ನು ಸುತ್ತುವಂತೆ ಬಿಳಿ ಅಥವಾ ಗುಲಾಬಿ ಮಿಶ್ರಿತ ಸಿಹಿ ತಿರುಳು ಕಾಣುತ್ತದೆ. ಈ ತಿರುಳನ್ನು ಪಕ್ಷಿಗಳು ಮತ್ತು ಮಕ್ಕಳು ತಿನ್ನುವುದನ್ನು ಸಾಮಾನ್ಯವಾಗಿ ನೋಡಬಹುದು.

80–90ರ ದಶಕದಲ್ಲಿ ಬೆಳೆದ ಹಲವಾರು ಜನರಿಗೆ ಈ ಹಣ್ಣುಗಳು ಅವರ ಬಾಲ್ಯದ ನೆನಪುಗಳನ್ನು ಜಾಗೃತಿಗೊಳಿಸುವ ಪರಿಚಿತವಾದ ಕಾಡುಹಣ್ಣುಗಳಲ್ಲಿ ಒಂದಾಗಿದೆ. ಈ ಮೇಲಿನ ಸಸ್ಯವರ್ಗದ ಹೆಸರು ಪ್ರಾದೇಶಿಕ ಭಾಷೆಯ ಆಧಾರದ ಮೇಲೆ ಜನತೆಯ ಆಡುಭಾಷೆಯಲ್ಲಿ ವಿಭಿನ್ನವಾಗಿರುತ್ತದೆ. ಆದರೆ, ಅವುಗಳ ಬಳಕೆ, ಉಪಯೋಗ ಮತ್ತು ಇತರೆ ಔಷಧೋಪಚಾರದ ಮಾಹಿತಿ ಹೆಚ್ಚಾಗಿ ಕಾಡಿನಲ್ಲಿ ವಾಸಿಸುವ ಜನತೆಗೆ ಅತ್ಯಂತ ಕರಾರುವಕ್ಕಾಗಿರುತ್ತದೆ.

ಈ ಕಲಿಕೆಯ ಜೊತೆಗೆ, ಅಳಿವಿನಂಚಿನಲ್ಲಿರುವ ಇಂತಹ ಸಸ್ಯ ಸಂಪತ್ತಿನ ಸಂರಕ್ಷಣೆ ಹಾಗೂ ಹೆಚ್ಚೆಚ್ಚು ಬೆಳೆಸಲು ಕ್ರಮವಹಿಸಬೇಕು. ಹಾಗೆಯೇ, ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದರ ಮೂಲಕ ಬೆಳೆಯುವ ರೈತರಿಗೆ, ಯುವ ಉತ್ಸಾಹಿ ಕೃಷಿಕರಿಗೆ ವಿಶೇಷ ಪ್ರೋತ್ಸಾಹ ನೀಡಿ ಚೈತನ್ಯ ತುಂಬುವ ಕೆಲಸ ಅರಣ್ಯ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳು ಮುತುವರ್ಜಿವಹಿಸಿ ಗಮನಹರಿಸಿವುದು ಬಹುಮುಖ್ಯ. ನಮ್ಮೆಲ್ಲರ ಆಶಯವೂ ಪೂರಕ ಸಹಕಾರದೊಂದಿಗೆ ಬರುವ ದಿನಗಳಲ್ಲಿ ಈಡೇರುವಂತಾಗಲಿ.

**ಪರಿಸರವೇ ಸಕಲ ಜೀವ-ಸಂಕುಲಕ್ಕೆ ಬದುಕು; ಹೊಚ್ಚ ಹೊಸ ಹಸಿರು ಪರಿಸರವನ್ನು ಮತ್ತೆ ಒಕ್ಕೊರಲಿನಿಂದ ಅತ್ಯಂತ ತುರ್ತಾಗಿ ಕಟ್ಟಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.**




ಲೇಖನ: **ಡಾ. ಚಂದ್ರಪ್ಪ ಹೆಚ್ .**
ಚಿತ್ರದುರ್ಗ ಜಿಲ್ಲೆ




## ಕಲ್ಲರಳಿ ಮರ

**Soft fig**

***Ficus mollis***

ಕಲ್ಲತ್ತಿ ಅಥವಾ ಕಲ್ಲರಳಿ ಮರವು, ಎಲೆ ಉದುರುವ ಕಾಡುಗಳಲ್ಲಿ 12 ಮೀಟರ್ ಎತ್ತರ ಬೆಳೆಯುವ ಮಧ್ಯಮ ಗಾತ್ರದ ಮರವಾಗಿದೆ. ಇದರ ಎಲೆಗಳು 5 ಸೆಂ. ಮೀ. ಉದ್ದ, 5 ಸೆಂ. ಮೀ ಅಗಲವಿದ್ದು, ಸರಳ ರಚನೆಯ ವಿನ್ಯಾಸವಿರುತ್ತದೆ. ಹೂಗಳು ಒಂದು ಸೆಂಟಿಮೀಟರ್ ಗಿಂತ ಚಿಕ್ಕದಾಗಿದ್ದು, ಕಂದು ಬಣ್ಣ ಇರುತ್ತವೆ. ಈ ಹೂಗಳಿಗೆ ಯಾವುದೇ ವಾಸನೆ ಇರುವುದಿಲ್ಲ. ಮರದ ಕಾಯಿ ಒಂದು ಮುಚ್ಚಿದ ಹೂಗೊಂಚಲು. ಚಿಕ್ಕ ಚೆಂಬಿನ ಆಕಾರದಲ್ಲಿರುವ ಇದರ ಕಾಯಿಯ ಒಳಭಾಗದಲ್ಲಿ ಮೃದುವಾದ **(hypanthodium inflorescence)** ಹೂಗೊಂಚಲುಗಳಿಂದ ತುಂಬಿರುತ್ತದೆ. ಕಾಯಿಯ ಒಳಭಾಗದಲ್ಲಿ ಬಹಳ ಸಂಖ್ಯೆಯ ಗಂಡು ಮತ್ತು ಹೆಣ್ಣು ಹೂಗಳು ಅಡಗಿಕೊಂಡಿರುತ್ತವೆ. ಚೆಂಬಿಗೆ ಒಂದು ಬಾಯಿ ಇದ್ದಂತೆ ಈ ಕಲ್ಲತ್ತಿ ಕಾಯಿಗೂ ಒಂದು ಕಿರಿದಾದ ದ್ವಾರ ಇರುತ್ತದೆ. ಇದರ ಮೂಲಕ ಸಾಗುವ **ಅಂಜೂರದ ಕಡಜ (fig wasp)** ಹಣ್ಣಿನ ಒಳಗೆ ಹೋಗಿ ಪರಾಗಸ್ಪರ್ಶ ಮಾಡುವ ಪ್ರಕ್ರಿಯೆಯೇ ಕಲ್ಲತ್ತಿ ಮರ ಮತ್ತು ಕಡಜಗಳ ನಡುವಿನ **ಪರಸ್ಪರ ಅವಲಂಬಿತ ಸಂಬಂಧ (mutualism)**. ಡಿಸೆಂಬರ್ - ಜೂನ್ ತಿಂಗಳಲ್ಲಿ ಕಾಯಿಗಳು ಬಿಡುತ್ತವೆ.

ಈ ಮರದ ತೊಗಟೆ ನುಣುಪಾಗಿದ್ದು, ಬೂದು ಬಣ್ಣದಲ್ಲಿರುತ್ತದೆ. ಈ ಮರ ಸೂರ್ಯನ ಬೆಳಕು ಚೆನ್ನಾಗಿ ಬೀಳುವ ಗುಡ್ಡಗಳ ಮೇಲೆ, ಕಲ್ಲು ಬಂಡೆಗಳ ಕೊರಕಲಿನಲ್ಲಿ ಬೆಳೆದಿರುತ್ತದೆ. ಕಡಿಮೆ ನೀರಿದ್ದರೂ ಬದುಕಬಲ್ಲ ಗುಣವಿರುವ ಈ ಸಸ್ಯದ ಬೆಳವಣಿಗೆ ಮಾತ್ರ ತುಂಬಾ ನಿಧಾನ. ಈ ಮರವು ಭಾರತ ಮತ್ತು ಶ್ರೀಲಂಕಾ ದೇಶಗಳಲ್ಲಿ ಸ್ಥಳೀಯವಾಗಿ ಕಾಣಸಿಗುತ್ತದೆ.

## ಔಷಧೀಯ ಗುಣಗಳು:

ಕಲ್ಲತ್ತಿ ಮರದಲ್ಲಿ ಆರೋಗ್ಯಕ್ಕೆ ಉಪಯೋಗವಾಗುವ ಹಲವಾರು ಗುಣಗಳಿವೆ. ಇದರಲ್ಲಿ ಇರುವ ಕೆಲವು ನೈಸರ್ಗಿಕ ರಾಸಾಯನಿಕಗಳು (flavonoids, phenolic compounds, tannins, terpenoids) ಇದರ ಔಷಧೀಯ ಗುಣಕ್ಕೆ ಕಾರಣವಾಗುತ್ತವೆ. ಇದಕ್ಕೆ ಆಂಟಿ ಆಕ್ಸಿಡೆಂಟ್ ಗುಣ ಇದೆ. ಅಂದರೆ ಇದು ದೇಹದಲ್ಲಿರುವ ಹಾನಿಕಾರಕ ಅಂಶಗಳನ್ನು (free radicals) ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಈ ಮರಕ್ಕೆ ಔಷಧೀಯ ಗುಣಗಳಿವೆ ಎಂದು ತಿಳಿದುಬಂದಿದೆ. ಆದರೆ, ಇದರ ಬಗ್ಗೆ ಇನ್ನೂ ಹೆಚ್ಚು ಅಧ್ಯಯನ ಮತ್ತು ಸಂಶೋಧನೆ ಮಾಡಬೇಕಾಗಿದೆ.











ಲೇಖನ: ಕೆ. ಪಿ. ಶಂಕರಪ್ಪ
ಶಾಂತಮ್ಮ ಎಸ್.
ಬೆಂಗಳೂರು ಜಿಲ್ಲೆ

# ವನಬಂಧ 10



**ಎಡದಿಂದ ಬಲಕ್ಕೆ**

1.ಇಲ್ಲೊಂದು ಹಿರಿದಾದ ಹಾವು ಮಲಗಿದೆ (3)

2. ಹಕ್ಕಿಗಳು ಹಾಡುವ ಈ ನಾದ ಮುಂಜಾನೆಯಲ್ಲಿ ಕಿವಿಗಿಂಪು (4)

3. ತಕರಾರು ಇಲ್ಲದೇ ಬೆಳೆದ ಆಹಾರ ಪದಾರ್ಥ (4)

4.ಪರಿವಾರದೊಂದಿಗೆ ನಗರವನ್ನು ಆಳುವ ಬೂದು ಬಣ್ಣದ ಪಕ್ಷಿ (4)

5. ಎರಡು ದಳಗಳನ್ನು ಹೀಗೂ ಕರೆಯಬಹುದು (3)

6. ಗೊರವರಿಗೂ ಈ ಹಕ್ಕಿಗೂ ಸಂಬಂಧವಿಲ್ಲ, ಆದರೂ ಬಲು ಬಿಂಕ (4)

7.ಜೇನು ಹುಳಗಳು ಹೂವಿನಲ್ಲಿ ಅರಸುವ ಸಿಹಿ (4)
8. ಶ್ರೀ ತೇಜಸ್ವಿ ಅವರ ಅನುವಾದದ ಕಾಡಿನ ಕಥೆಗಳು ಸರಣಿಯ ಪ್ರಮುಖ ಪಾತ್ರಧಾರಿ (5)

## ಮೇಲಿನಿಂದ ಕೆಳಕ್ಕೆ

1. ತಬ್ಬಲಿಯಲ್ಲ, ಆದರೆ ಭಯಾನಕವಾಗಿದೆ ಈ ವ್ಯಾಘ್ರ (3)
2. ಸಾಕಾನೆಯ ವಾರಸುದಾರ ಮಾವು ತರಲು ಹೋಗಿದ್ದಾನೆ. (3)
3. ಈ ನಗರಿಯಲ್ಲಿ ಹಕ್ಕಿಗಳ ಪುಕ್ಕವೊಂದು ಅವಿತು ಕುಳಿತಿದೆ (2)
4. ಗಾಜು ಮೂಲಭೂತವಾಗಿ ಈ ಗುಣ ಹೊಂದಿರುತ್ತದೆ (5)
5. ಸುವಾಸನೆ ಇಲ್ಲಿ ತಲೆಕೆಳಗಾಗಿದೆ (4)
6. ದನದ ಕೊಟ್ಟಿಗೆಯಿಂದ ಬೇಸಾಯದ ಭೂಮಿಗೆ ಈ ವಸ್ತುವನ್ನು ಸಾಗಿಸಲು ಅಬ್ಬರವೇಕೆ (3)
7. ಮನೆಯ ಕದ ಮುಚ್ಚಿದ್ದರೂ ಯುದ್ಧ ನಡೆಯುತ್ತಲೇ ಇದೆ (3)
8. ಕಪ್ಪು ಬಣ್ಣದ ವಟಗುಟ್ಟುವ ಮಂಡೂಕ (2)

## ಕಾನನ ವನಬಂಧ - 09 (ಫೆಬ್ರವರಿ - 2026) ಉತ್ತರಗಳು:

### ಎಡದಿಂದ ಬಲಕ್ಕೆ:

1. ಶಾಮ 2. ಟಿಟ್ಟಿಭ 3. ಮುತ್ತತ್ತಿ 4. ಗಗನ

5. ಜೇಡ 6. ಕಾಗದ 7. ಮಹಾನದಿ 8. ಆನೆಕಲ್ಲು

### ಮೇಲಿನಿಂದ ಕೆಳಕ್ಕೆ:

1. ಮರಕುಟಿಗ 2. ಭತ್ತ 3. ಮುತ್ತುಗ 4. ಗರುಡ

5. ಜೇನುಗೂಡು 6. ಕಾನನ 7. ಮದ್ದಾನೆ 8. ಕರಡಿ

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"**

ವನಬಂಧ: ಸುಬ್ಬು ಬಾದಲ್
ಬೆಂಗಳೂರು ಜಿಲ್ಲೆ


© Romolo Tavani_Shutterstock

ವಿವಿ ಅಂಕಣ

# ಭೂಮಿಗೆ ಅಪ್ಪಳಿಸಬಲ್ಲ ಕ್ಷುದ್ರಗ್ರಹಗಳು!

8, 9... ಆ...10... ಅಲ್ಲೀ...11! ಒಟ್ಟು 11 ಉಲ್ಕೆಗಳು. ತಮಿಳುನಾಡಿನ ಉರಿಗಮ್ ಎಂಬ ಊರಿನ ಬಳಿಯ ಯಾವುದೋ ಒಂದು ಸಣ್ಣ ಹಳ್ಳಿಯ ಬಳಿ ನಾನು, ನನ್ನ ಸ್ನೇಹಿತ ಮತ್ತು ಇಬ್ಬರೋ ಮೂರು ಜನ ಖಗೋಳದ ಬಗ್ಗೆ ತಿಳಿದ ಅಣ್ಣಂದಿರ ಜೊತೆಗೆ ಅಂದು ನಕ್ಷತ್ರ ವೀಕ್ಷಣೆಗೆಂದು ಅಲ್ಲಿಗೆ ಹೋಗಿದ್ದೆವು. ರಾತ್ರಿಯ ಹೊತ್ತು ನಕ್ಷತ್ರ ವೀಕ್ಷಿಸಲು ಟೆಲಿಸ್ಕೋಪ್ ಅಳವಡಿಸಬೇಕು. ಅದಕ್ಕೆ ಸರಿಯಾದ ಕತ್ತಲಿನ ಜಾಗ, ಎತ್ತರದ ಮರಗಳು ನಕ್ಷತ್ರ ವೀಕ್ಷಣೆಗೆ ಅಡ್ಡಿ ಮಾಡದ ಬಯಲು ಪ್ರದೇಶವನ್ನು ಹುಡುಕಬೇಕಿತ್ತು. ಆ ಕೆಲಸದಲ್ಲಿ ನಮ್ಮ ಅಣ್ಣಂದಿರು ತಲ್ಲೀನರಾಗಿದ್ದರು. ನಾನೂ ಮತ್ತು ನನ್ನ ಸ್ನೇಹಿತ ಮತ್ತೇನು ಮಾಡುವುದು? ಇಬ್ಬರು ಒಂದು ದೇವಸ್ಥಾನದ ಪಕ್ಕ ಇದ್ದ ಮದುವೆ ಮಂಟಪದ ಮೇಲೆ ಹತ್ತಿದೆವು. ಆಕಾಶದತ್ತ ಮುಖ ಮಾಡುತ್ತಾ, ಎರಡೂ ಕೈಗಳನ್ನು ತಲೆಯ ಕೆಳಗೆ ದಿಂಬಿನ ಹಾಗೆ ಇರಿಸಿ ಹಾಗೇ ನಕ್ಷತ್ರವನ್ನು ಎಣಿಸಲಿಕ್ಕೆ ಶುರು ಮಾಡಿದೆವು.



© joy_asteroids counting

ಆ ಕತ್ತಲಿನ ಆಕಾಶದ ಕಪ್ಪು ಹಾಳೆಯಲ್ಲಿ ಯಾರೋ ಬಿಳಿಯ ರೇಖೆಯನ್ನು ಗೀಚಿದ ಹಾಗೆ, ಉಲ್ಕೆಯೊಂದು ನಮ್ಮ ಕಣ್ಣ ಮುಂದೆಯೇ ಕ್ಷಣಾರ್ಧದಲ್ಲಿ ಹಾರಿತು. ಇಬ್ಬರೂ ಅದನ್ನು ಕಂಡ ತಕ್ಷಣ ಒಬ್ಬರನ್ನೊಬ್ಬರು ನೋಡಿಕೊಂಡೆವು. ಕಣ್ಸನ್ನೆಯೇ ನಮ್ಮ ಆಶ್ಚರ್ಯವನ್ನು ಇಬ್ಬರಿಗೂ ರವಾನೆ ಮಾಡಿತ್ತು. ಮತ್ತೆ ಆಕಾಶದ ಕಡೆ ಮುಖ ಮಾಡಿದೆವು. ಎರಡೇ ನಿಮಿಷದಲ್ಲಿ

ಇನ್ನೊಂದು ಉಲ್ಕೆ! ನಮ್ಮ ಸಂತಸಕ್ಕೆ ಪಾರವೇ ಇರಲಿಲ್ಲ. ಇದನ್ನ ಅಣ್ಣಂದಿರಿಗೆ ಹೇಳಲೇಬೇಕು ಎಂದು ಓಡಿ, ಹೇಳಿದೆವು. ಆಗ ಅವರು 'ಹಾ... ಈಗ ಡಿಸೆಂಬರ್ ತಿಂಗಳಲ್ವಾ ಉಲ್ಕಾಪಾತ ಜಾಸ್ತಿ ಇರ್ತದೆ' ಎಂದರು. ಹಾಗಾದರೆ, ನಾವೇಕೆ ಎಣಿಸಬಾರದು? ಎಂದು ಶುರು ಮಾಡಿದೆವು. ಅಣ್ಣಂದಿರು ಟೆಲಿಸ್ಕೋಪ್ ಅನ್ನು ತಯಾರು ಮಾಡುವಷ್ಟರಲ್ಲಿ ಅಂದು ಒಟ್ಟು 11 ಉಲ್ಕೆಗಳನ್ನು ಎಣಿಸಿಬಿಟ್ಟಿದ್ದೆವು. ನನ್ನ ಜೀವನದಲ್ಲಿ ಅಂದೇ ನಾನು ಅತೀ ಹೆಚ್ಚು ಉಲ್ಕೆಗಳನ್ನು ನೋಡಿದ್ದು!!


## ನೀವೆಷ್ಟು ನೋಡಿದ್ದೀರಾ?

ನೋಡಿ, ಉಲ್ಕೆಗಳಿಗೂ - ಕ್ಷುದ್ರಗ್ರಹಗಳಿಗೂ ವ್ಯತಾಸವಿದೆ. ಇವೆರಡು ಬಾಹ್ಯಾಕಾಶದಲ್ಲಿರುವ ಕಲ್ಲುಗಳು, ಗ್ರಹದ ತುಣುಕುಗಳು ಹಾಗೂ ಕೆಲವೊಮ್ಮೆ ಲೋಹಗಳೂ ಆಗಿರುತ್ತವೆ. ಇವೆರಡಕ್ಕೂ ಇರುವ ಮುಖ್ಯ ವ್ಯತ್ಯಾಸ ಇವುಗಳ ಗಾತ್ರ. ಸುಮಾರು 1 ಮೀಟರ್ ಗಿಂದ ಕಡಿಮೆ ವ್ಯಾಸವಿರುವ ಇಂತಹ ಬಾಹ್ಯ ವಸ್ತುಗಳಿಗೆ ಉಲ್ಕೆಗಳು/ಉಲ್ಕಾ ಕಣಗಳು ಎನ್ನುತ್ತಾರೆ. ಗಾತ್ರದಲ್ಲಿ ಇದಕ್ಕಿಂತ ದೊಡ್ಡದಿರುವುದನ್ನು ಕ್ಷುದ್ರಗ್ರಹಗಳು ಎನ್ನುತ್ತಾರೆ. ಕ್ಷುದ್ರಗ್ರಹಗಳು ಮುಖ್ಯವಾಗಿ ಮಂಗಳ ಮತ್ತು ಗುರು ಗ್ರಹಗಳ ಮಧ್ಯದಲ್ಲಿರುವ ಜಾಗದಲ್ಲಿ ಅಸಂಖ್ಯಾತವಾಗಿ ಸಿಗುತ್ತವೆ. ಇದನ್ನು 'ಎಸ್ಟಿರೋಯ್ಡ್ ಬೆಲ್ಟ್' ಎಂದು ಕರೆಯುತ್ತಾರೆ. ಈ ಕ್ಷುದ್ರ ಗ್ರಹಗಳು ಕೆಲವೊಮ್ಮೆ ಬಂದು ಭೂಮಿಗೆ ಅಪ್ಪಳಿಸುವ ಅವಕಾಶಗಳೂ ಸಹ ನಾವೂ ಊಹಿಸುವುದಕ್ಕಿಂತಲೂ ಹೆಚ್ಚು ಸಂಭವವಿದೆ. ಉದಾಹರಣೆಗೆ 66 ಮಿಲಿಯನ್ ವರ್ಷಗಳ ಹಿಂದೆ ಹೀಗೆ ಬಂದು ಅಪ್ಪಳಿಸಿದ ಒಂದು ಕ್ಷುದ್ರ ಗ್ರಹದಿಂದಲೇ ಅಂದಿನ ಭೂಮಿಯ ಮೇಲಿನ ಜೀವಿಗಳಾದ ಡೈನೋಸಾರ್ ಗಳು ನಶಿಸಿ ಹೋದವೆಂದು ವಿಜ್ಞಾನಿಗಳು ಹೇಳುತ್ತಾರೆ.



ಅಂತಹ ಕ್ಷುದ್ರ ಗ್ರಹಗಳು ಈಗಲೂ ನಮ್ಮ ಭೂಮಿಗೆ ಬಂದು ಅಪ್ಪಳಿಸಬಹುದು ಗೊತ್ತೇ? ಅಯ್ಯೋ... ಯಾವಾಗಲೋ ಮಿಲಿಯನ್ ವರ್ಷಗಳ ಹಿಂದೆ ಅಪ್ಪಳಿಸಿದ್ದು. ಆ ಅವಕಾಶ ಕಡಿಮೆ ಎಂದು ತಪ್ಪು ತಿಳಿಯಬೇಡಿ. ಏಕೆಂದರೆ ಆ ಅವಕಾಶ ಪ್ರತೀ 11000 ವರ್ಷಕ್ಕೊಮ್ಮೆ ಇದೆ ಎಂದು ಹೇಳುತ್ತಿದೆ ಹೊಸ ಸಂಶೋಧನೆ.

© C.R. Nugent et al_The Planetary Science Journal 2025





ಈಗಾಗಲೇ ಹೇಳಿದ ಹಾಗೆ ನಮ್ಮ ಸೌರಮಂಡಲದಲ್ಲಿ ಕ್ಷುದ್ರ ಗ್ರಹಗಳು ಸಾಕಷ್ಟಿವೆ. ಸೂರ್ಯನ ಸುತ್ತ ನಮ್ಮ ಗ್ರಹದ ಹಾಗೇ ಅವುಗಳೂ ಸುತ್ತುತ್ತಿವೆ. ಆಗಾಗ್ಗೆ ಅವುಗಳು ಅಲ್ಲಿಂದ ಹೊರ ಬಂದು ಸೌರಮಂಡಲದ ಇತರ ಗ್ರಹಗಳಿಗೆ ಅಪ್ಪಳಿಸಬಹುದು. ಜೊತೆಗೆ ನಮ್ಮ ಸೌರಮಂಡಲದ್ದಲ್ಲದ ಕ್ಷುದ್ರಗ್ರಹಗಳೂ ಸಹ ಬರಬಹುದು. ಆದರೆ ನಮ್ಮ ಜೀವಿತಾವಧಿಯಲ್ಲಿ ಇಂತಹ ಯಾವುದೇ ಘಟನೆ ನಡೆದಿಲ್ಲವಲ್ಲ ಎಂದು ನಿಮಗನ್ನಿಸಬಹುದು. ಅದು ಸತ್ಯವೂ ಹೌದು. ಹಾಗೆಂದು ನಮ್ಮ ಜೀವಿತಾವಧಿಯಲ್ಲಿ ಇಂತಹ ಘಟನೆ ನಡೆಯಲು ಸಾಧ್ಯವಿಲ್ಲ ಎಂದು ಹೇಳಲಾಗುವುದಿಲ್ಲ. ಇದನ್ನು ತಿಳಿಯಲೆಂದು, *ಕ್ಯಾರಿ ನುಜೆಂಟ್* ಎಂಬ ಖಗೋಳ ವಿಜ್ಞಾನಿ ಮತ್ತು ಅವರ 6 ವಿದ್ಯಾರ್ಥಿಗಳು 'JPL Horizons' ಎಂದು ಕರೆಯಲ್ಪಡುವ ಕಂಪ್ಯೂಟರ್ ಪ್ರೊಗ್ರಾಮ್ ಒಂದನ್ನು ಬಳಸಿಕೊಂಡು ಸಂಶೋಧನೆ ಶುರು ಮಾಡಿದರು.

ಅದರಲ್ಲಿ ಸುಮಾರು 140 ಮೀಟರ್ (460 ಅಡಿ) ಉದ್ದದ ಕ್ಷುದ್ರಗ್ರಹಗಳ ಅವುಗಳ ತರಂಗಗಳಿಂದ ಅವುಗಳನ್ನು ಗ್ರಹಿಸಿ, ಅವು ನಮ್ಮ ಭೂಮಿಯತ್ತ ಬರುತ್ತಿವೆಯೇ? ಅಥವಾ ಬರಬಲ್ಲವೇ? ಎಂದು ತಿಳಿಯಲು ಹೊರಟರು. ಅಂದರೆ ಒಂದು ಸಣ್ಣ ಗಾತ್ರದ ಹಡಗಿನಷ್ಟು ದೊಡ್ಡದಾದ ಕ್ಷುದ್ರಗ್ರಹ ನಮ್ಮ ಭೂಮಿಗೆ ಅಪ್ಪಳಿಸುವ ಸಾಧ್ಯತೆ ಎಷ್ಟು ಎಂದು. ಅವರ ತಾಳೆಯ ಪ್ರಕಾರ ಪ್ರತೀ 11000 ವರ್ಷಗಳಿಗೊಮ್ಮೆ ಇಂತಹ ಅಪ್ಪಳಿಕೆ ಸಾಧ್ಯವಿದೆ ಎಂದು ತಿಳಿದು ಬಂದಿದೆ. ಹಾಗೆಂದು ಇದರಿಂದ ಕಳವಳಗೊಳ್ಳಬೇಕಿಲ್ಲ. ಏಕೆಂದರೆ ಇದನ್ನು ನಮಗೆ ಅರ್ಥವಾಗುವ ರೀತಿಯಲ್ಲಿ ಹೇಳುವುದಾದರೆ, ಅಕಸ್ಮಾತ್ ಇಂತಹುದೊಂದು ಘಟನೆ ನಡೆದರೆ, ಅದರಲ್ಲಿ ನಾವು ಸಾಯುವ ಸಂಭವಕ್ಕಿಂತ ಮಳೆಗಾಲದ ಮಿಂಚಿನ ಹೊಡೆತಕ್ಕೆ ಸಾಯುವ ಸಂಭವವೇ ಹೆಚ್ಚಂತೆ! ಅಷ್ಟೇ ಅಲ್ಲಾ, ಪ್ರತಿದಿನ ವಾಹನಗಳಲ್ಲಿ ಸಂಚರಿಸುವ ನಾವು ಅವುಗಳ ಅಪಘಾತದಿಂದ ಸಾಯುವ ಸಂಭವ ಇನ್ನೂ ಹೆಚ್ಚಂತೆ.

ಟಿ. ವಿ, ಸಿನೆಮಾಗಳಲ್ಲಿ ತೋರಿಸುವ ಹಾಗೆ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಿದರೆ ಬದುಕುವುದೇ ಅಸಾಧ್ಯವೆಂದು ತೋರಿಸುವುದುಂಟು. ಆದರೆ ವಾಸ್ತವದಲ್ಲಿ ಅದರ ತದ್ವಿರುದ್ಧ! ನಾಸಾ (NASA) 2022ರಲ್ಲಿ ನಡೆಸಿದ 'ನಾಸಾ ಡಾರ್ಟ್' ಎಂಬ ಒಂದು

ಕಾರ್ಯಾಚರಣೆಯಲ್ಲಿ ಕ್ಷುದ್ರಗ್ರಹಗಳು ಭೂಮಿಗೆ ಅಪ್ಪಳಿಸುವ ಯಾವ ಸಂಭವವಿಲ್ಲದಿದ್ದರೂ ಪ್ರಯೋಗಕ್ಕಾಗಿ ಒಂದು ಕ್ಷುದ್ರಗ್ರಹವನ್ನು ಮಿಸ್ಸೈಲ್ ನಿಂದ ಹೊಡೆಯಿತು. ಅದರಿಂದಾಗಿ ಅದರ ಚಲನೆಯ ದಿಕ್ಕೇ ಬದಲಿತು. ಆದ್ದರಿಂದ ಮುಂದೊಂದು ದಿನ ಇಂತಹ ಘಟನೆ ನಡೆಯುವ ಸಂಭವ ಬಂದರೂ ಅದರಿಂದ ಭೂಮಿಯನ್ನು ತಪ್ಪಿಸುವ ತಂತ್ರಜ್ಞಾನ ಈಗಾಗಲೇ ನಮ್ಮ ಬಳಿ ಇದೆ ಎನ್ನುತ್ತಾರೆ *ನುಜೆಂಟ್*) ಅದರ ಜೊತೆ ಜೊತೆಗೆ ಖಗೋಳದ ಸಮೀಕ್ಷೆಗಳು ಇಂತಹ ಸಂದರ್ಭವನ್ನು ಇನ್ನೂ ಕ್ಷೀಣಿಸಬಹುದು ಎಂಬುದು ವಿಜ್ಞಾನಿಗಳ ಅನಿಸಿಕೆ.

ನಿಮ್ಮ ಅನಿಸಿಕೆಯೇನು? ನಮಗೆ ಬರೆದು ತಿಳಿಸಿ...



**Source:** www.snexplores.org



**ಲೇಖನ: ಜೈಕುಮಾರ್ ಆರ್.**

**ಬೆಂಗಳೂರು ನಗರ ಜಿಲ್ಲೆ**

# ಮರ ನೀ ಅಮರ



ಓ ಮರಗಳೇ ನಿಮ್ಮ ಹೆಸರಲ್ಲಿದೆ ಎರಡೇ ಎರಡು ಅಕ್ಷರ
ಆದರೂ ಬೆಳೆಯುವಿರಿ ನೀವು ಬಹಳ ಎತ್ತರ
ಪರಿಸರದ ನೂರು ಪ್ರಶ್ನೆಗಳಿಗೆ ನೀವೇ ಉತ್ತರ
ನಿಮ್ಮ ಸಲಹಿದ ವೃಕ್ಷ ಮಾತೆ ತಿಮ್ಮಕ್ಕನ ನಡುಗೆ ಅಕ್ಕರೆಯ ಆಗರ

ಹಸಿರಾಗಿ ಹಬ್ಬುವ ರೆಂಬೆ ಕೊಂಬೆಗಳು ಹಕ್ಕಿಗಳ ಗೂಡು
ನಿಮ್ಮ ನೆರಳು ಕೋಟಿ ಕೋಟಿ ಕೀಟಗಳ ನಾಡು
ಮಣ್ಣೊಳಗೆ ಬೇರುಗಳು ಸೂಕ್ಷ್ಮ ಜೀವಿಗಳ ಕಾಡು
ಒಣಗಿ ಉದುರಿದರೆ ಎಲೆಗಳು ರಸಗೊಬ್ಬರದ ಬೀಡು

ಕಾಡಲ್ಲಿ ನೀವು ಇಳೆಗೂ ಮಳೆಗೂ ಬೆಸುಗೆಯ ಕೊಂಡಿ
ಹೊಲದಲ್ಲಿ ಒಣಗಿ ಧರೆಗುರುಳಿದರೆ ಎತ್ತಿನ ಬಂಡಿ
ಮನೆಗಳಲ್ಲಿ ಕಿಟಕಿ-ಮಂಚ ಸುಖಾಸನಗಳ ಜೋಡಿ
ಬೇಡವಾದರೆ ಅಗ್ನಿಯಲ್ಲಿ ಅಂತಿಮ ನುಡಿ.

ಮಣ್ಣು ಸಂರಕ್ಷಣೆ ನಿಮ್ಮ ಬವಣೆ
ಸಕಲ ಜೀವಿಗಳ ಮೇಲೂ ನಿಮಗಿದೆ ಅಗಾಧ ಕರುಣೆ
ನಿಮ್ಮನ್ನೆಲ್ಲಾ ರಕ್ಷಿಸುವುದು ಪ್ರತಿ ಮನುಜನ ಹೊಣೆ
ಅಂತಿಮವಾಗಿ ನೀವೇ ಅಲ್ಲವೆ ಸಕಲರ ಜೀವಾಧಾರಣೆ?

ಬಿ. ಸೀತಾರಾಮ
ಬೆಂಗಳೂರು ಜಿಲ್ಲೆ

© ಪ್ರವೀಣ್ ಎಸ್.

# ಪ್ರಕೃತಿ ಬಿಂಬ



**ಕಂದು ಹೂ** © ಡಾ. ಶಿಶುಪಾಲ ಎಸ್.

ಏಷ್ಯಾ ಖಂಡದ ಸಮತಟ್ಟು ಪ್ರದೇಶ, ಎಲೆ ಉದುರುವ ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಜುನೋನಿಯಾ ಇಫಿಟಾ (Junonia iphita) ಎಂದು ಕರೆಯಲಾಗುತ್ತದೆ. ಕಿತ್ತಳೆ ಕಂದು ಬಣ್ಣದ ಮೇಲ್ಭಾಗವನ್ನು ಹೊಂದಿದ್ದು, ಹಲವಾರು ಕಂದು ಪಟ್ಟೆಗಳನ್ನೂ ಸಹ ಹೊಂದಿದೆ. ಕೆಳಗಿನ ರೆಕ್ಕೆಗಳ ಮೇಲೆ ಹಲವಾರು ಕೆಂಪು ಮಿಶ್ರಿತ ಕಂದು ಬಣ್ಣದ ಕಣ್ಣಿನಂತಹ ಮಚ್ಚೆಗಳ ಸರಣಿಯನ್ನು ಹೊಂದಿದೆ. ಸಾಮಾನ್ಯವಾಗಿ ರೆಕ್ಕೆಗಳನ್ನು ತೆರೆದು ಗಿಡ ಅಥವಾ ನೆಲದ ಮೇಲೆ ಕೂತು ಬೇಟೆಯಾಡುತ್ತದೆ. ಅಕಾಂಥೇಸಿ (Acanthaceae) ಕುಟುಂಬಕ್ಕೆ ಸೇರುವ ರುಯೆಲಿಯಾ ರಿಪನ್ಸ್ (Ruellia repens) ಮತ್ತು ಹೆಮಿಗ್ರಾಫಿಸ್ ರೆಪ್ಟಾನ್ಸ್ (Hemigraphis reptans) ಇದರ ಅತಿಥೇಯ ಸಸ್ಯಗಳಾಗಿವೆ.



**ಅಲೆಮಾರಿ** © ಡಾ. ಶಿಶುಪಾಲ ಎಸ್.

ಏಷ್ಯಾ ಮತ್ತು ಆಸ್ಟ್ರೇಲಿಯಾ ಖಂಡಗಳ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ಅಲೆಮಾರಿ ಚಿಟ್ಟೆಯು ಪಿಯರಿಡೇ (Pieridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಯಾಟೊಪ್ಸಿಲಿಯಾ ಪೊಮೊನಾ (Catopsilia pomona) ಎಂದು ಕರೆಯಲಾಗುತ್ತದೆ. ರೆಕ್ಕೆಗಳು ಹಳದಿ ಅಥವಾ ತೆಳು ಹಸಿರು ಮಿಶ್ರಿತ ಬಿಳಿ ಬಣ್ಣದ್ದಾಗಿವೆ. ಕೆಲವೊಮ್ಮೆ ಹೆಣ್ಣು ಚಿಟ್ಟೆಗಳು ತೆಳು ಹಳದಿ ಬಣ್ಣವಿದ್ದು, ಕೆಳಗಿನ ರೆಕ್ಕೆಗಳ ಹಿಂಭಾಗದ ಕೋಶದ ತುದಿಯಲ್ಲಿ ಕಂದು ಬಣ್ಣದ ಮಚ್ಚೆಗಳನ್ನು ಹೊಂದಿರುತ್ತದೆ. ಬೇಸಿಗೆಯಲ್ಲಿ ಸಾವಿರಾರು ಚಿಟ್ಟೆಗಳು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ. ಗುಂಪಿನಲ್ಲಿ ವಲಸೆ ಹೋಗುತ್ತವೆ. ಫ್ಯಾಬೇಸಿ (Fabaceae) ಕುಟುಂಬದ ಸೀಮೆತಂಗಡಿ ಮರ, ಮುತ್ತುಗ ಮರ ಇದರ ಅತಿಥೇಯ ಸಸ್ಯಗಳಾಗಿವೆ.



**ನೀಲಿ ಕುಪ್ಪಿ** © ಡಾ. ಶಿಶುಪಾಲ ಎಸ್.

ಪೂರ್ವ, ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಎಲೆ ಉದುರುವ ಕಾಡು ಮತ್ತು ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ನೀಲಿ ಕುಪ್ಪಿ ಚಿಟ್ಟೆಯು ಪ್ಯಾಪಿಲಿಯೊನಿಡೆ (Papilionidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಗ್ರ್ಯಾಫಿಯಂ ಸಾರ್ಪೆಡಾನ್ (Graphium sarpedon) ಎಂದು ಕರೆಯಲಾಗುತ್ತದೆ. ಕೆಳಗಿನ ಮತ್ತು ಮೇಲಿನ ರೆಕ್ಕೆಗಳು ಕಪ್ಪಾಗಿದ್ದು, ತಳದ ಹೊರಭಾಗದಲ್ಲಿ ಉದ್ದವಾದ ನೀಲಿ ಪಟ್ಟೆಯಿರುತ್ತದೆ ಮತ್ತು ಅದರ ಸುತ್ತ ಕೆಲವು ಕೆಂಪು ಬಣ್ಣದ ಮಚ್ಚೆಗಳಿರುತ್ತವೆ. ಅಂಚಿನಲ್ಲಿ ಅರ್ಧ ಚಂದ್ರಾಕೃತಿಯ ನೀಲಿ ಮಿಶ್ರಿತ ಹಸಿರು ಮಚ್ಚೆಗಳಿರುತ್ತವೆ. ವೇಗವಾಗಿ ಹಾರಾಡುತ್ತವೆ ಮತ್ತು ತೇವಾಂಶವಿರುವ ಮಣ್ಣಿನ ಮೇಲೆ ಗುಂಪುಗುಂಪಾಗಿ ಕಂಡು ಬರುತ್ತವೆ. ಲಾರೇಸಿ (Lauraceae) ಕುಟುಂಬದ ಕಾಡು ದಾಲ್ಚಿನ್ನಿ ಹಾಗೂ ಕರ್ಪೂರದ ಮರದ ಜಾತಿಗೆ ಸೇರಿದ ವಿವಿಧ ಮರಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.




**ತ್ರಿವರ್ಣೆ** **© ಡಾ. ಶಿಶುಪಾಲ ಎಸ್.**

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡು, ಎಲೆ ಉದುರುವ ಕಾಡು ಮತ್ತು ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ತ್ರಿವರ್ಣೆ ಚಿಟ್ಟೆಯು ಪಿಯರಿಡೇ (Pieridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಡೆಲಿಯಾಸ್ ಯೂಕರಿಸ್ (Delias eucharis) ಎಂದು ಕರೆಯಲಾಗುತ್ತದೆ. ಮೇಲಿನ ರೆಕ್ಕೆಯ ಹಿಂಭಾಗ ಕಪ್ಪು ಬಣ್ಣದಾಗಿದ್ದು, ಅಂಚಿನಲ್ಲಿ ಹಾಗೂ ಬಿಳಿ ಕೋಶದ ಹೊರಭಾಗದಲ್ಲಿ ಬಿಳಿ ಮಚ್ಚೆಗಳ ಎರಡು ಸಾಲಿರುತ್ತದೆ. ಕೆಳಗಿನ ರೆಕ್ಕೆಯ ಹಿಂಭಾಗದ ಅಂಚಿನಲ್ಲಿ ಕೆಂಪು ಮಚ್ಚೆಗಳ ಸಾಲಿದ್ದು, ಉಳಿದ ಭಾಗ ಮಂದ ಹಳದಿ ಬಣ್ಣದ್ದಾಗಿರುತ್ತದೆ. ತನ್ನ ಪ್ರಕಾಶಮಾನವಾದ ಬಣ್ಣದಿಂದ ಈ ಎಚ್ಚರಿಕೆಯನ್ನು ಕೂಡ ನೀಡುತ್ತದೆ. ಎತ್ತರದ ಮರಗಳಲ್ಲಿ ಹಾರಾಡುತ್ತವೆ ಮತ್ತು ಹೂಗಳ ಬಳಿ ಹೆಚ್ಚಾಗಿ ಕಾಣಬಹುದು. ಲೊರಾಂಥೇಸಿ (Loranthaceae) ಕುಟುಂಬದ ಬಂದಳಿಕೆ ಗಿಡ ಇದರ ಅತಿಥೇಯ ಸಸ್ಯವಾಗಿದೆ

**ಚಿತ್ರ: ಡಾ. ಶಿಶುಪಾಲ ಎಸ್.**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಪೆಂಗ್ವಿನ್‌ಗಳು ದಕ್ಷಿಣಾರ್ಧ ಗೋಳದಲ್ಲಿ ಕಂಡುಬರುವ ಹಾರಲಾರದ ಪಕ್ಷಿಗಳು. ಅಂಟಾರ್ಟಿಕಾ ಸೇರಿದಂತೆ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತವೆ. ಕಪ್ಪು-ಬಿಳಿ ಬಣ್ಣದ ದೇಹ ಮತ್ತು ಈಜುಗೈಗಳಾಗಿ ರೂಪಾಂತರಗೊಂಡ ರೆಕ್ಕೆಗಳು ಇವುಗಳ ವಿಶೇಷತೆ. ಪೆಂಗ್ವಿನ್‌ಗಳು ಸಮುದ್ರದಲ್ಲಿ ಮೀನು, ಕ್ರಿಲ್ ಹಾಗೂ ಸಣ್ಣ ಜಲಜೀವಿಗಳನ್ನು ಆಹಾರವಾಗಿ ಸೇವಿಸುತ್ತವೆ ಮತ್ತು ಸಂತಾನೋತ್ಪತ್ತಿ ಕಾಲದಲ್ಲಿ ಭೂಮಿಯ ಮೇಲೋ ಹಿಮದ ಮೇಲೋ ಕಾಲ ಕಳೆಯುತ್ತವೆ.

ಕೆಲವು ಪ್ರದೇಶಗಳಲ್ಲಿ ಮೀನುಗಾರಿಕೆ ಮತ್ತು ಹವಾಮಾನ ಬದಲಾವಣೆಯಿಂದ ಅವುಗಳ ಆಹಾರ ಲಭ್ಯತೆ ಮತ್ತು ವಾಸಸ್ಥಳಕ್ಕೆ ಸವಾಲು ಎದುರಾಗುತ್ತಿದೆ. ಸಮುದ್ರ ಹಿಮ ಕರಗುವಿಕೆ ಪೆಂಗ್ವಿನ್‌ಗಳ ಉಳಿವಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಪೆಂಗ್ವಿನ್‌ಗಳ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು **ಏಪ್ರಿಲ್ 25** ರಂದು **ವಿಶ್ವ ಪೆಂಗ್ವಿನ್ ದಿನ** ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



© ಅರವಿಂದ ರಂಗನಾಥ್

